ಸಮಯಕ್ಕೆ ಸರಿಯಾಗಿ ಪಟಾಕಿ ಹಚ್ಚುವವನು ಗುಲಾಬಿ ಕುಳಿತ ಕುದುರೆಯಡಿ ದೊಡ್ಡದೊಂದು ಪಟಾಕಿ ಹಚ್ಚಿ ಎಸೆದಿದ್ದ. ಅದು ಢಂ... ಎಂಬ ಶಬ್ದ ಮಾಡುವ ಜೊತೆಗೆ ಕುದುರೆ ನಾಗಾಲೋಟದಿಂದ ಮಲ್ಲೂರ ಕಡೆ ಓಟ ಕೀಳುವಂತೆ ಮಾಡಿತ್ತು. ಕ್ಷಣದಲ್ಲಿ ಗುಲಾಬಿ ಕುಳಿತ ಕುದುರೆ ನಾಪತ್ತೆಯಾಗಿತ್ತು. ಎಲ್ಲರೂ ಕತ್ತಲಲ್ಲಿ ಮರೆಯಾದ ಕುದುರೆ ಮತ್ತು ಕುದುರೆ ಮೇಲಿದ್ದ ಗುಲಾಬಿಗಾಗಿ ಹುಡುಕುತ್ತಾ ಓಡತೊಡಗಿದರು. ಓಡಿಹೋದ

